Regd No. M 1299 SATYAVADI Founded1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 47] ಗುರುವಾರ 27–11–47 [ಬಿಡಿ ಪ್ರತಿ 3 ಪೈ

ಸೇವರ ದೃಷ್ಟಿಯಲ್ಲಿ ಎಲ್ಲರೂ ಒಂದೆ

ಹಿಂದೂ ದೇವಸ್ಥಾನ ಒಂದರಲ್ಲಿ ಜೆ ನಡೆದಿತ್ತು. ಪೂಜೆಯ ಮಧ್ಯದ ಗ್ರಾಮದ ಸಭ್ಯರೊಬ್ಬರು ಬಂದರು ರನ್ನು ಮರ್ಯಾದೆ ಪೂರ್ವಕ ದೇವರ ಗ್ರಹದ ಹತ್ತಿರದ ಆಸನ ಒಂದರಲ್ಲಿ ರಿಸಿದರು. ನನಗೆ ಆಶ್ಚರ್ಯವಾ ತು ಆತನ ದುಡ್ಡಿಗೆ ಬೆಲೆಯೋ ಆ ಆತನ ಸದ್ಗುಣಕ್ಕೆ ಸ್ಥಾನವೇ ಎಂ ವಿಚಾರಿಸಲು ಗ್ರಾಮದ ಧನಿಕರವ ದು ತಿಳಿಯಬಂದಿತು.

ವಸೀದಿಯೊಂದರಲ್ಲಿ ದಮಾಜು ನಡೆ ುತ್ತಿತ್ತು. ಶ್ರೀಮಂತ ಪ್ಲಾಂಟ ಬ್ಬರು ಬಂದರು ಅವರು ಮುಂದೆ ಗ್ಗಿ ಪ್ರಥಮ ಸ್ಥಾನವನ್ನಾಕ್ರಮಿಸಲಿ ಕಿಕ್ಕಿರಿದು ತುಂಬಿದ್ದ ಇತರ ಮು ಮರ ಹಿಂದೆ ಕಾಲೂ ಮಂಡಿಸಿದರು. ಮ್ಮ ನೆರೆ ಊರಿನ ಮುಸ್ಲಿಮರಿಗೆಲ್ಲಾ ವರು ಪುಂಡಾಳು. ಜೊತೆಗೆ ಧನ ಂತರು. ಇವರಸ್ಟೇಕೆ ಮುಸಲ್ಮಾನ ು ಆದರಿಸಿ ಮುಂದೆ ಕೂರಿಸಲಿಲ್ಲ? ಖುದಾಕೆ ಘಂ ಮೆ ಸಬ್ ಏಕ್‌ಹೈಂ ೀವರ ಮನೆಯಲ್ಲಿ ಎಲ್ಲರೂ ಸಮಾನರು ಂದುತ್ತರ ಬಂತು

ದೇವರು ತೋಳಿನ ಬಲವನ್ನಾಗಲೀ ೀಬಿನ ತೂಕವನ್ನಾಗಲೀ ಬ್ಯಾಂಕಿನ ಿಕ್ಕವನ್ನಾಗಲೀ ನೋಡುವವನಲ್ಲ. ತನು ನೋಡುವುದ ಹೃದಯದ ಆಳ ನ್ನು, ಅಲ್ಲವೇ? (ಕೊ)

ಹಳ್ಳಿ ಮುಳುಗಿಹೋಯ್ತು

ಸೇಪಾಳದಲ್ಲಿ ಒಂದು ನದಿಗೆ ವಿಪ ೀತ ಪ್ರವಾಹ ಬಂದು ಧರ್ ಎಂಬ ಹಳ್ಳಿ ನೀರಿನಲ್ಲಿ ಮುಳುಗಿಹೋಯ್ತು.

ವೈ ಡ್ ಲ್ಯಾಂಡ್ಸ್

28–11–47 ರಿಂದ

ಮಾಯಾದೇವಿ

ರಮೇಶ್

ಡಬ್ಲ್ಯೂ. ಎಂ. ಖಾನ್

ಅನ್ವಾರ್

— ಪಾತ್ರಪರಿಚಿಸುವ —

ರಾಜ

(ಅಮೋಘ ಹಿಂದಿ ಚಿತ್ರ)

ಪ್ರತಿದಿನ 3 ಆಟಗಳು

ಹೈದರಾಬಾದಿನಿಂದ 100 ಕೋಟಿ

ರೂಪಾಯಿ ಹೊರಕ್ಕೆ ಹಾರಿದೆಯಂತೆ !

100 ಕೋಟಿ

ಬೊಂಬಾಯಿ ನ 25 .... ಹೈದರಾಬಾದು ಕಾಂಗ್ರೆಸ್ ಪ್ರಕಟಣಾಧಿಕಾರಿ ಪ್ರಕಟಿಸಿರುವ ಬುಲ್ಲಿನ್ನಿನಲ್ಲಿ ಸುಮಾರು 100 ಕೋಟಿ ರೂ, ಹೈದರಾಬಾದಿಂದ ಹೊರಕ್ಕೆ ಹಾರಿಸಲಾಗಿದೆಯೆಂದೂ, 15 ಸಾವಿರ ಮಂದಿ ಮುಸ್ಲಿಮೇತರು ಜೋ ಲಾರಾವಿಗೆ ಹೋಗಿರುವರೆಂದೂ ತಿಳಿಸಿ ರುವರು.

ಸ್ವತಂತ್ರ ನಗರ

ಭಾರತದಲ್ಲಿನ ಫ್ರೆಂಚು ಸ್ವಾಸ್ಥ್ಯ ಗಳಾದ ಪಾಂಡಿಚೆರಿ ಕರೈಕಲ್ ಮಾಹೆ ಯಾನಾಂ ಚಂದ್ರನಾಗೂಲು 'ಸ್ವತಂತ್ರ ನಗರ' ಗಳಾಗಿ ಸಾರಲ್ಪಟ್ಟವೆ.

ಕೆ.ದುರೆ ಜೂಬಿಲ್ಲಿ

ಡಾಕಾ ದ 24 .... ಪೂ. ಬಂಗಾಳಾ ದಲ್ಲಿ ಇನ್ನು ಮುಂದೆ ಕುದುರೆ ಜೂಜು ವಜಾಮಾಲಾಗುವುದೆಂದು ಹೇಳ ಲಾಗಿದೆ

ಮುಷ್ಕರ

ಮಧುರಾ ನ 26 .... ಹೋಟಲು ಕೆಲಸಗಾರರು 300 ಮಂದಿ ಮುಷ್ಕರ ಹಿಡಿ ದಿರುವರು

ಆಹಾರ ಬರುತ್ತೆ

ನವದೆಹಲಿ ನ 25 .... ದಿನಕ್ಕೆ 2 ಹ ಡಗುಗಳಂತೆ ಡಿಸೆಂಬರು 20 ರೊಳಗೆ ಭಾರತಕ್ಕೆ 347500 ಆಹಾರ ಧಾನ್ಯ ಬಂದು ಬೀಳುವುದು.

ಭಾರತದ ಬಡ್ಜೆಟ್

ಸ್ವತಂತ್ರ ಭಾರತದ ಪ್ರಥಮ ಬಡ್ಜೆ ಟ್ಟಿನಲ್ಲಿ 26-24 ಕೋಟಿ ರೂ. ಖೋ ತಾ ಕಂಡುಬಂದಿದೆ.

ಪಾಕಿಸ್ತಾನ್ ಧ್ವಜ

ಪಾಕಿಸ್ತಾನದ ಧ್ವಜವನ್ನು ಭಾರತ ರಾಷ್ಟ್ರದಲ್ಲೆಲ್ಲೂ ಹಾರಿಸಲಿಲ್ಲಾಗದೆಂದು ಡಾ|| ಸುಬ್ಬರಾಯಸ್ಟರು ಮದರಾಸು ಶಾಸನ ಸಭೆಯಲ್ಲಿ ತಿಳಿಸಿದರು

ಕಲ್ಲು ಸಿಡಿತ

ಬೆಂಗಳೂರು ನ 25 .... ಕೋಲಾರದ ಚಿನ್ನದ ಗಣಿಯಲ್ಲಿ ಕೈಬಾಂಡ್ ಸಿಡಿದು 10 ಮಂದಿ ಸತ್ತರೆಂದು ಹೇಳಲಾಗಿದೆ.

ಮಹಾ ಮುಷ್ಕರ

ಪ್ಯಾರಿಸ್ ನ 26.... 1250 ಸಾವಿರ ಮಂದಿ ಕೆಲಸಗಾರರು ಮುಷ್ಕರ ಹಿಡಿ ದಿದ್ದಾರೆ

ವನಿತಾಸದನ

ಮೈಸೂರು ಜಯನಗರದಲ್ಲಿರುವ ವನಿತಾಸದನದ ವಿಶೇಷ ಸಮಾರಂಭವು ಈವತ್ತಿನಿಂದ ತಾ || 30 ರವರೆಗೆ ನಡೆ ಯುವುದು,

ಉಪವಾಸ

ಪ.ದಂತಾಸು ಸರಕಾರಿ ಭವನದ ಮುಂ ದೆ ಶಾಸನ ಸಭಾ ಮೆಂಬರು ಶ್ರೀ ಕುವ್ವ ಸ್ವಾಮಿಯವರು ಉಪವಾಸ ಹೂಡಿ ದ್ದಾರೆ. ಅಕ್ಟೋಬರಿಂದ ಮುಚ್ಚಲ್ಪ ಟ್ಟಿರುವ ಜಯಲಕ್ಷ್ಮೀ ಮತ್ತು ಕನುಲರ ಗಿರಣಿಗಳು ತೆರೆಯುವವರೆಗೂ ಉಪ ವಾಸ ನಡೆಸುವರಂತೆ

ಮೈಸೂರು .... ಮೈಸೂರು ಡಿ || ಸಂತೆಗಳಲ್ಲಿ ಹೆಂಡ ಮತ್ತ ಇತರ ಮಾದಕ ಪದಾರ್ಥಗಳನ್ನು ಮಾರಕೂಡದೆಂದು ಪೈಸಿಹೆಂಟರು ಆಜ್ಞೆ ಮಾಡಿದಾರೆ.

ಬೆಂಗಳೂರು.... ಭಾರತ ಸರಕಾರವು ಸಂಸ್ಥಾನಕ್ಕೆ ನವೆಂಬರು ತಿಂಗಳಲ್ಲಿ 1186 ಬೇಲು ಬಟ್ಟೆ ಹೆಚ್ಚಾಗಿ ನಿಗದಿ ಮಾಡಿದೆ

ಉಮೇದುವಾರಿಕೆ ಪತ್ರ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ನೂತನ ಕಾರ್ಯಕಾರೀ ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ ಮತ್ತು ನದ ಸ್ಯ ಸ್ಥಾನಗಳಿಗೆ ಉಮೇದುವಾರರಾಗಿ ನಿಲ್ಲ ಲು ಅಪೇಕ್ಷೆಯುಳ್ಳವರು ತಮ್ಮ ಉಮೇ ದುವಾರಿಕಾ ಪತ್ರವನ್ನು ಡಿಸೆಂಬರ್ 1 ನೇ ತಾರೀಖು ಸಂಜೆ 6 ಗಂಟೆಯೊ ಳಗೆ ಕಾರ್ಯಾಲಯಕ್ಕೆ ಕಳುಹಿಸಬೇ ಕಾಗಿ ಕಾರ್ಯದರ್ಶಿಗಳಾದ ಶ್ರೀ ಶಾಂತ ರಾಜ್‌ರವರು ತಿಳಿಸಿರುತ್ತಾರೆ.

ಂ ಂ

ಬಿ ಬಿ ಸಿ

ಬ್ರಿಟಿಷ್ ಬ್ರಾಡ್ ಕ್ಯಾಸ್ಟಿಂಗ್ ಕಾರ್ಪೊರೇಷ್ ವಾರಂಪ್ರತಿ 5 ಸಾವಿರ ಗ್ರಾಮೊಫೋನು ರಿಕಾರ್ಡುಗಳನ್ನು ವಿ ವಿಧ ಪ್ರೋಗ್ರಾಮುಗಳಿಗಿಾಗಿ ಉಪ ಯೋಗಿಸುತ್ತಿದೆ

ಂ ಂ

ಭಾರಿ ಚಪ್ಪರದವರೆ

ಲಂಡ್ ನಗರದಲ್ಲಿ ಒಂದು ಮನೆಯ ಹಿತ್ತಲಲ್ಲಿ 30 ಅಂಗುಲ ಉದ್ದ ಮದು ಷ್ಯನ ಮಣಿಕಟ್ಟಸಷ್ಟು ದಪ್ಪವುಳ್ಳ ಚಪ್ಪ ರದವರೇ ಕಾಯಿಗಳು ಬೆಳೆದಿವೆ

ಂ ಂ

ಭಂಗಾರದ ರಾಶಿ

1945 ರಲ್ಲಿ ನಾಜಿಗಳಿಂದ ಲೂಟಿ ಮಾಡಲ್ಪಟ್ಟಿದ್ದ 2125 ಸಾವಿರ ಪೌಂಡು ಗಳ ಭಂಗಾರವನ್ನು ಭಾರಿ ರಕ್ಷಣೆಗೊಳ ಗೂಡಿದ ರೈಲಿನಲ್ಲಿ ತರಲಾಯಿತು.

ಂ ಂ

ಅತ್ಯಾಚಾರಿಗೆ ಶಿಕ್ಷೆ

9 ವರ್ಷದ ಒಬ್ಬ ಹುಡುಗಿಯು ಮೇ ಲೆ ಅತ್ಯಾಚಾರ ನಡೆಸಿದೆ ದೊರೆಸ್ವಾಮಿ ಎಂಬುವನಿಗೆ ಮದರಾಸು ಹೈಕೋರ್ಟ್ ನವರಿಂದ 7 ವರ್ಷ ಸಜಾ ವಿಧಿಸ ಲಾಗಿದೆ.

ಂ ಂ

ಅವಿವಾಹಿತರ ಸಂಘ

ಅಲಹಾಬಾದಿನಲ್ಲಿ ಸ್ಥಾಪಿತವಾಗಿ ರುವ ಅವಿವಾಹಿತ ಸಂಘದ ಸದಸ್ಯರು ತಮ್ಮ ಜೀವನ ಮಟ್ಟವನ್ನು ಬೆಳೆಸಿಕೊ ಳ್ಳುವವರೆಗೆ ಮದುವೆಯಾಗದಿರಬೇಕೆಂ ದು ನಿಯಮ.

ಂ ಂ

ಭಾರತವರ್ಷ

ಹಿಂದೂಸ್ಥಾನ ಒಕ್ಕೂಟಕ್ಕೆ 'ಭಾ ರತ ವರ್ಷ' ಎಂಬ ಹೆಸರನ್ನಿಡಬೇಕೆಂ ಶ್ರೀ ಬಾಳಿಕೃಷ್ಣ ಶರ್ಮರು ಸ್ಥಾಪ ಸಮಿತಿಯಲ್ಲಿ ಒಂದು ಸೂಚನೆ ತ ರೆಂದು ತಿಳಿಯಬಂದಿದೆ.

ಕಳ್ಳರ ಬುದ್ಧಿ ಚಾತುರ್ಯ

ಕಲ್ಕತ್ತೆಯಲ್ಲಿ ಇಬ್ಬರು ಒಂದು ಕಾರಿನಲ್ಲಿ ಬಂದು ಒಬ್ಬ ಪೆಟ್ರೋಲು ವ್ಯಾಪಾರಿಯಲ್ಲಿ ಎರಡು ಗ್ಯಾಲ್ಕ್ ಪೆಟ್ರೋಲು ಕೇಳಿದರು. ಆವಕ್ಕೆ ಕೂಪನ್ ಕೇಳಲು ತಮ್ಮ ಗೈಕಿ ಒಬ್ಬನು ಹಿಂದಿನ ಅಂಗಡಿಯಲ್ಲಿ ಸಿಗರೇಟು ಕೊಳ್ಳುತ್ತಿದ್ದು ಅವನು ಬಂದೊಡನೆ ಕೂಪನ್ ಕೊಡುವುದಾಗಿ ಹೇಳಿದರು. ಅಷ್ಟರಲ್ಲಿ ಪೆಟ್ರೋಲು ಕೊಡಬಹುದೆಂದು ಹೇಳಿದರು. ಪೆಟ್ರೋಲು ಪೂರೈಸುವಷ್ಟರಲ್ಲಿ ಒಬ್ಬ ಪೋಲೀಸು ಅಧಿಕಾರಿಯು ಬಂದು ಕೊಟ್ಟ ಪೆಟ್ರೋಲಿಗೆ ಕೂಪನ್ ಎಲ್ಲಿದೆ ತೋರಿಸೆಂದು ಕೇಳಿದನು. ಅದು ಇರಲಿಲ್ಲ. ಆಗ ಪೋಲೀಸು ಅಧಿಕಾರಿಯು 5 ಸಾವಿರ ರೂ ಕೇಳಿದನು, ಇಲ್ಲವಾದರೆ ಕೂಪನ್ ಇಲ್ಲದೆ ಕಳ್ಳಪೇಟೆಯಲ್ಲಿ ಪೆಟ್ರೋಲು ಮಾರಲಾಗುತ್ತಿದೆಂಬ ಆರೋಪವಿಟ್ಟು ಲೈಸನ್ಸು ರದ್ದುಮಾಡಲು ತಿಳಿಸುವುದಾಗಿ ಬೆದರಿಕೆ ಹಾಕಿದನು. ವ್ಯಾಪಾರಿಯು ಗಾಬರಿಗೊಂಡು ತನ್ನಲ್ಲಿದ್ದ 1500 ರೂ ಕೊಟ್ಟು ಕ್ಷಮಿಸಬೇಕೆಂದು ಬೇಡಿಕೊಂಡನು. ಆಗ ಆ ಹಣ ತೆಗೆದುಕೊಂಡು ಮೂವರೂ ಪರಾರಿಯಾದರು. ಒಳ್ಳೇ ಕಳ್ಳರು ಅಲ್ಲವೇ ಇವರು. (ಲೋ)

ಂ ಂ

ಹರಿಜನೋದ್ಧಾರ

ಮದರಾಸು ಸರಕಾರದಲ್ಲಿ ಹರಿಜನರಿಗೆ ಹೆಚ್ಚು ಹುದ್ದೆಗಳನ್ನು ಕೊಡಲಾಗುವುದೆಂದು ತಿಳಿಯಬಂದಿದೆ

ನಿನ್ನೆ ಪತ್ರಿಕೆಯಲ್ಲಿ ಕಂಪಾಜಿಟರ ಅಜಾಗರೂಕತೆಯಿಂದ ಕೆಲವು ತಪ್ಪುಗಳು ಬಿದ್ದಿರುವುದಕ್ಕಾಗಿ ವಿಷಾದಿಸುತ್ತೇವೆ.

Woodlands

Morning Shows at 10-30
From 28—11—47 For 4 days

Atlantic Ferry

— starring —
Veleric Hobson
Michael Redgrave

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press Chamaraja Agahar Mysore.

Woodlands

ಯಶಸ್ವಿ 4ನೇ ವಾರ

ಅಶೋಕಕುಮಾರ್

ವೀರಾ, ಪ್ಯಾರೊ, ಪಾತ್ರವಹಿಸಿರುವ

ಪಿ
ಪಿಕಾರಿ
ರಿ

(ಅಮೋಘ ಹಿಂದಿ ಚಿತ್ರ)

At Opera From 20–11–47

ಮಾಲತಿ — ಶಿವಭಾಗ್ಯಂ

ಎಸ್. ಎ. ಸುಬ್ಬಯ್ಯ — ಸಂಬಿಯಾರ್

ಪಾತ್ರವಹಿಸಿರುವ

ಕಂಜನ್

ತಮಿಳು ಚಿತ್ರ — ಇದರ ಜೊತೆಯಲ್ಲಿ ಕೊಯಮತ್ತೂರಿನಲ್ಲಿ ಸ್ವತಂತ್ರ ದಿನಾಚರಣೆ ಮತ್ತು ಮಹಾತ್ಮಾ ಗಾಂಧಿಯ ವರಸಳನಿ ಯಾತ್ರೆ ಫಿಲಿಂ ಸಹಾ ತೋರಿಸಲಾಗುತ್ತೆ.

SHAKTI SUDHA

A Superb TONIC

ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆರಾಜೆ

ವಾರ್ಷಿಕ ಚಂದ ಪರಸ್ಥಳಕ್ಕೆ

ಅಂಚೆವೆಚ್ಚ ಸೇರಿ ರೂ. 9.

ಸೋಮವಾರಪಂಚಿಕೆ ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1–12–0

ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ನೂತನ ಅಧ್ಯಕ್ಷರು

ಶ್ರೀ 'ಓಂ' ಗುರುತಿನ

ಪರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ-ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯೆ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಷ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಾಚಾರ ಸಮಾರಂಭಗಳಲ್ಲಿಯೂ [illegible] ದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣಿ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು